1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 20925-2024

ಸಿಡಬ್ಲೂ -6 ಪಿಡಬ್ಲೂ-6

ಸಾಕ್ಷಿದಾರರ ಹೆಸರು : ಲೋಹಿತ್ ವಿ
ತಂದೆಯ ಹೆಸರು : ವೆಂಕಟರಮಣಪ್ಪ
ವಯಸ್ಸು : 38 ವರ್ಷ
ಕೆಲಸ : ವ್ಯವಸ್ಥಾಪಕರು, ಏರಟೇಲ್ ಕಂಪನಿ
ವಾಸ : ತುಮಕೂರು

ಸಾಕ್ಷಿಯನ್ನು ದಿನಾಂಕಃ 20-12-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು ಡಿಸೆಂಬರ್ 2018 ರಿಂದ ನಾನು ಏರಟೇಲ್ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಚಾಸಾ 2 ರಿಂದ 5 ರವರು ಮತ್ತು ಆರೋಪಿ ಗೊತ್ತು. 2018-19 ನೇ ಸಾಲಿನಲ್ಲಿ ನಾನು ಟೆರಿಟೋರಿ ಮ್ಯಾನೇಜರ್ ಆಗಿ ಏರಟೇಲ್ ಕಂಪನಿಗೆ ಚಿಕ್ಕಬಳ್ಳಾಪುರಕ್ಕೆ ನೇಮಕವಾಗಿ ಕೆಲಸ ಮಾಡುತ್ತಿದ್ದೆ. ನನ್ನ ಕೈ ಕೆಳಗೆ ಸುಧಾ ಎಂಟರಪ್ರೈಸಸ್ಸ ಇಸ್ತೂರಿ ಎಂಟರಪ್ರೈಸಸ್ಸ, ಪ್ರಸನ್ನ ಎಂಟರಪ್ರೈಸಸ್ಸ ಮತ್ತು ವಿಶ್ವಾಸ ಎಂಟರಪ್ರೈಸಸ್ಸ ರವರು ವಿತರಕರಾಗಿ ಕೆಲಸ ಮಾಡುತ್ತಿದ್ದರು.

ಆ ಸಮಯದಲ್ಲಿ ಆರೋಪಿಯು ನಮ್ಮ ಸಂಸ್ಥೆಗೆ ನೇಮಕವಾಗಿದ್ದು, 2 ತಿಂಗಳುಗಳ ಕಾಲ ಕೆಲಸ ಮಾಡಿದ್ದರು. ಆ ತಿಂಗಳ ಅವಧಿಯಲ್ಲಿ ಆರೋಪಿಯು ನಾವು ಸೀಮ್ ಆಕ್ಟಿವೇಷನ್ ಮಾಡಲು ಪ್ರಮೊಟರ್ ಗೆ ನೀಡಲಾದ ಸೀಮ್ ಕಾರ್ಡಗಳನ್ನು ದರುಪಯೋಗ ಪಡಿಸಿಕೊಂಡು ಪ್ಯಾನ್ಸಿ ನಂಬರ್ ಗಳನ್ನು ಆಕ್ಟಿವೇಷನ್ ಮಾಡಿರುತ್ತಾರೆ. ಈ ಬಗ್ಗೆ ವಿಚಾರಿಸಲಾಗಿ ಅಸಹಜ ನಡುವಳಿಗೆ ಕಂಟು ಬಂದ ಕಾರಣ ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ.

ಸಹಜವಾಗಿ ಪ್ರಮೋಟರ್ ಅವರು ಸೀಮ್ ಗಳನ್ನು ಆಕ್ಟಿವೇಷನ್ ಮಾಡಿದಾಗ ಅದು ವಿತರಕರಿಗೆ ತಿಳಿದು ಬರಬೇಕು ಆದರೆ ಆ ರೀತಿಯಾಗಿ ಸೀಮ್ ಆಕ್ಟಿವೇಷನ್ ಮಾಡಿದ ಸಂಗತಿ ಆರೋಪಿಯಿಂದ ವಿತರಕರಿಗೆ ತಿಳಿದು ಬರುತ್ತಿರಲಿಲ್ಲ. ನಾವು ರಿಟೇಲರ್ ಗಳಿಗೆ ನೀಡಲಾದ ಸೀಮ್ ಕಾರ್ಡ ಗಳಿಂದ ರಿಚಾರ್ಜ ಮಾಡಬೇಕಾದರೆ ಸದರಿ ಸೀಮ್

ಗಳಲ್ಲಿ ಬ್ಯಾನ್ಸ ಇರಬೇಕು, ರಿಟೆಲರಗಳಿಗೆ ಡಿಸ್ಟ್ರಿಬ್ಯೂಟರ್ ರವರ ಕಡೆಯಿಂದ ಹಣ ವರ್ಗಾವಣೆ ಆಗಬೇಕು. ಆದರೆ ಆ ರೀತಿಯಾಗಿ ಯಾವುದೇ ಹಣ ವರ್ಗಾವಣೆ ಮಾಡದೇ ನೇರವಾಗಿಯೇ ಹಣ ಅಕ್ಯೂಮಲೇಟ್ ಆಗುತ್ತಿತ್ತು. ಈ ವಿಚಾರ ನನಗೆ ತಿಳಿದು ಬಂದ ನಂತರ ನಾನು ನಮ್ಮ ಇಂಟರನಲ್ ಕಮಮೀಟ್ (ಹೋಮ್ ಬರ್ಡ್ಸ ) ರವರಿಗೆ ದೂರು ನೀಡಿರುತ್ತೇನೆ.

ಆ ಕಾರಣದಿಂದ ಆರೋಪಿಯನ್ನು ಕೆಲಸದಿಂದ ತೆಗೆದುಹಾಕಿರುತ್ತೇವೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ಪಾಟೀ ಸವಾಲು ಆರೋಪಿತರ ಪರ ವಕೀಲರು ಪಾಟೀ ಸವಾಲನ್ನು ಮಾಡಲು ಸಮಯಾವಕಾಶವನ್ನು ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ